ಕಪ್ಪು ಬುರ್ಖಾ ಧರಿಸಿ, ಕಪ್ಪಳ್ಳಿಯ ಕಪ್ಪು ಕೆರೆಯಲ್ಲಿ ಸತ್ತ, ಮಲ್ಲಿಗೆ ಹೂವಿನಷ್ಟು ಬಿಳುಪು ಮೈಮನಗಳ ಹುಡುಗಿ ಶ್ರೀದೇವಿಯ ಸಾವು ಎಲ್ಲರಿಗೂ ಒಂದು ಕಗ್ಗಂಟಾಗಿಯೇ ಉಳಿದಿದೆ.

ಬಹುಶಃ ಸೀರೆಯಲ್ಲಿ ಶ್ರೀದೇವಿ ಸತ್ತಿದ್ದರೆ, ಆಕೆಯ ಸಾವು ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಗುತ್ತಿರಲಿಲ್ಲವೋ ಏನೋ? ಹಾಗೆಯೇ ಆಕೆ ಮುಸ್ಲಿಂ ತರುಣನೊಬ್ಬನನ್ನು ಪ್ರೀತಿಸುವಷ್ಟು ಎದೆಗಾರಿಕೆಯುಳ್ಳ ಹೆಣ್ಣಾಗಿದ್ದರೂ ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲವೋ ಏನೋ? ಹಾಗೆಂದ ಮಾತ್ರಕ್ಕೆ ಕಪ್ಪಳ್ಳಿಯಲ್ಲಿ ನಡೆದ ಗಲಭೆಗಳು ಅನಿವಾರ್ಯವಾಗಿತ್ತೆಂದು ನಾನು ಒಪ್ಪಿಕೊಳ್ಳುವುದಿಲ್ಲ. ಜಾತಿ ಜಾತಿ ಎಂದೇ ಸಾಯುವ ಮಂದಿಗೆ ಈ ಗಲಭೆಗಳು ಹಿಂದೂ ಮುಸ್ಲಿಂ ಗಲಭೆಗಳಾಗಿಯೇ ಕಂಡಿರಬಹುದು.

ಶ್ರೀದೇವಿಯ ಸಾವು ಪ್ರೀತಿಯಿಂದುಂಟಾದುದು. ಕಾರಣವಿಲ್ಲದೇ ನಿಂತಲ್ಲಿ, ಕುಳಿತಲ್ಲಿ ನಡೆವಲ್ಲಿ, ನುಡಿವಲ್ಲಿ ಕಪ್ಪು ರಕ್ತ ಹರಿಸುವ ಕಪ್ಪಳ್ಳಿಯ ಜನಕ್ಕೆ ಪ್ರೀತಿ ಪ್ರೇಮಗಳೆಂಬ ಪದಗಳು ಅಸ್ತಿತ್ವದಲ್ಲಿದೆಯೆಂದೇ ತಿಳಿದಿರಲಾರದು. ಈ ಅನಾಹುತಕ್ಕೆ 'ಶ್ರೀದೇವಿಯ ಸಾವೇ ಕಾರಣ' ಎಂದು ಸತ್ತವಳ ಮೇಲೆ ಗೂಬೆ ಕೂರಿಸುವ ಮಾತಾಡಿದರೂ, ಆ ಗಲಭೆಗೆ ಅವಳಲ್ಲ, ಕಪ್ಪಳ್ಳಿಯ ಜನರೇ ಕಾರಣ. ಒಂದಾಗಿ ಬಾಳಲು ಕಲಿಯದೆ ಬಂದ ಕಪ್ಪಳ್ಳಿಯ ಜನರೇ ಕಾರಣ.

ಶ್ರೀದೇವಿಯ ಸಾವು, ಸತ್ತಾಗ ಅವಳು ಧರಿಸಿದ್ದ ಕಪ್ಪು ಬುರ್ಖಾ... ಇವುಗಳ ಹಿಂದೆ, ಕಪ್ಪಳ್ಳಿಯಂತ ಜನರ ನಡುವೆಯೂ ಮಲ್ಲಿಗೆ ಹೂವಾಗಿ ಅಸ್ತಿತ್ವ ಉಳಿಸಿ... ಬೆಳೆಸಿಕೊಂಡ ಮುಗ್ಧ ಪ್ರೀತಿಯ, ಹುಡುಗಿಯ ಕಥೆ ಇದೆ. ಓದುವುದಾದರೆ ಓದಿ:

ಕಪ್ಪಳ್ಳಿಯ ಕಪ್ಪು ಚರಿತ್ರೆಯಲ್ಲಿ ಪ್ರಾಯಶಃ ಶ್ರೀದೇವಿಯ ಕಥೆ ಬಿಳಿಯ ಟಿಪ್ಪಣಿಯಾಗಬಹುದು. ಯಾಕೆಂದರೆ ಜಾತಿ ಹೆಸರಿನಲ್ಲಿ ಬರೆದ ಚರಿತ್ರೆ ಎಂದಿಗೂ ಕಪ್ಪು. ಪ್ರೀತಿ ಹೆಸರಿನಲ್ಲಿ ಕಣ್ಣುಮುಚ್ಚಿದ ಶ್ರೀದೇವಿಯ ಬಾಳು ಬಿಳುಪು.

ಕಪ್ಪಳ್ಳಿಯಲ್ಲಿ ಸೇತುವೆಯ ಕಾಮಗಾರಿ ಕೆಲಸಗಳು ಆರಂಭವಾದಾಗ ಪ್ರಕಾಶ್ ಭಾಟಿಯಾನೊಂದಿಗೆ ಬಂದಿಳಿದ ಅಸಿಸ್ಟೆಂಟ್ ಎಂಜಿನಿಯರ್ ನಾಗೇಶ್ ಭಟ್ ಕೆಂಪು ಬಿಳುಪು ಮಿಶ್ರಿತ ಮುಖದಲ್ಲಿ ಕಪ್ಪು ಕನ್ನಡಕ ಹಾಕಿ ಓಡಾಡುವ ಮೃದುಮಾತಿನ ಸುಂದರಾಂಗ. ಬಹುಶಃ ಎಲ್ಲ ಹೆಣ್ಣುಗಳೂ ಬಯಸಬಹುದಾದಂತಹ ಒಳ್ಳೆಯಗಂಡು!

ನಾಗೇಶ್ ಭಟ್ ಒಂದು ದಿನ ನನ್ನ ಜೊತೆ ಇದ್ದ ಶ್ರೀದೇವಿಯನ್ನು ಕಂಡಿದ್ದ. ಅವನ ನೋಟ, ನುಡಿಗಳು ಅವನವಳಿಗೆ ಸಂಪೂರ್ಣವಾಗಿ ಮನಸೋತಿದ್ದನ್ನು ಮುಚ್ಚಿಡಲಾರದಂತಿದ್ದವು. ಆತ ಅವಳನ್ನು ಭೇಟಿಯಾಗಿದ್ದು ಮೂರೇ ಬಾರಿ. ಅದೂ ಕೆಲವೇ ನಿಮಿಷಗಳ ಅವಧಿಯಲ್ಲಿ ಅದಷ್ಟೇ ಕ್ಷಣಗಳಲ್ಲಿ ಅವನು ಶ್ರೀದೇವಿಯ ಮೇಲೆ ತೋರಿದ ಪ್ರೀತಿ, ಅವಳ ಜೀವವನ್ನೇ ಅಪಹರಿಸುವುದೆಂದು ಬಹುಶಃ ನಾನು, ಆತ, ಅವಳು, ಯಾರೂ ಊಹಿಸಿರಲಿಲ್ಲ.

ನಾನು ಕಂಡಂತೆ ಅವರು ಕಣ್ಣಿಗೆ ಕಣ್ಣು ಸೇರಿಸುತ್ತಿರಲಿಲ್ಲ. ಕೈಗೆ ಕೈ ಹಾಕಿ ಮರಸುತ್ತಿ ಹಾಡು ಹೇಳಲಿಲ್ಲ. ಅವೆಲ್ಲಾ ಕಪ್ಪಳ್ಳಿಯ ಬದುಕಿನಲ್ಲಿ ಕನಸಿಗೂ ಮೀರಿದ ವಿಚಾರಗಳಾಗಿದ್ದವು. ಶ್ರೀದೇವಿಯನ್ನು ಮೂರನೇ ಬಾರಿ ಭೇಟಿಯಾದಾಗ ನಾಗೇಶ್ ಭಟ್ ನೇರವಾಗಿ... ನನ್ನೆದುರಿಗೇ... ಶ್ರೀದೇವಿಯ ಬಳಿ ಕೇಳಿದ್ದ, 'ನನ್ನನ್ನು ಮದುವೆಯಾಗಿವಿರಾ' ಎಂದು. ಶ್ರೀದೇವಿ, ಭೂದೇವಿಯಲ್ಲಿ ಹೂತು ಹೋಗುವಷ್ಟು ನಾಚಿಕೆಯಿಂದ ಮುದುಡಿ ಹೋಗಿದ್ದಳು. ಆ ಪ್ರಶ್ನೆಗೆ ಅವಳು 'ಹೌದು ಅಥವಾ ಇಲ್ಲ' ಎರಡನ್ನೂ ಹೇಳಲಿಲ್ಲ. 'ಬಾ, ಅಪ್ಪಯ್ಯ ಬರುವ ಹೊತ್ತು' ಎಂದು ನನ್ನನ್ನೂ ಎಳೆದುಕೊಂಡು ಸರಸರನೇ ಸಾಗಿ ಬಂದಿದ್ದಳು.